ಸಾರಿಗೆ ಸಂಸ್ಥೆಯಲ್ಲಿ ವಿಭಾಗ ನಿಯಂತ್ರಣಾಧಿಕಾರಿ ಹುದ್ದೆಗೆ ಬಡ್ತಿ

364 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಾರಿಗೆ ಸಂಸ್ಥೆಯಲ್ಲಿ ಡಿಪ್ಲೋಮಾ ಮಾಡಿದವರಿಗೆ ಕ್ಲಾಸ್ -1 ಸೀನಿಯರ್ ಸ್ಕೇಲ್ ಹುದ್ದೆಯಾದ ವಿಭಾಗ ನಿಯಂತ್ರಣಾಧಿಕಾರಿ ಹುದ್ದೆಗೆ ಬಡ್ತಿ ನೀಡಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ವೃಂದ ಮತ್ತು ನೇಮಕಾತಿ ನಿಯಮವನ್ನು ಅನುಸರಿಸಿ ನೀಡಲಾಗಿದೆಯೇ?*

ಇ) *ಇದೇ ಹುದ್ದೆಗೆ ಬಿ.ಇ. (ಮೆಕ್ಯಾನಿಕಲ್) ಪದವೀಧರರಿಗೆ ಬಡ್ತಿ ನೀಡಲು ಅನುಸರಿಸುವ ನಿಯಮ ಯಾವುದು?*

ಈ) *ಸದರಿ ಬಡ್ತಿಯನ್ನು ಜೇಷ್ಠತಾ ಪಟ್ಟಿಗನುಗುಣವಾಗಿ ನೀಡಲಾಗಿದೆಯೇ ಹಾಗಿಲ್ಲದಿದ್ದಲ್ಲಿ ತಪ್ಪಿತಸ್ತರ ಮೇಲೆ ಕೈಗೊಂಡ ಕ್ರಮವೇನು?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಪದವ್ಯಂದ ಮತ್ತು ನೇಮಕಾತಿ) ನಿಯಮಾವಳಿ 1982ನ್ನು ಅನುಸರಿಸಿ ಬಡ್ತಿ ನೀಡಲಾಗಿದೆ

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪದವ್ಯಂದ ಮತ್ತು ನೇಮಕಾತಿ ನಿಯಮಾವಳಿ 1982ರ ಪ್ರಕಾರವೇ ಪರಿಗಣಿಸಲಾಗುವುದು.

ಈ) ವಿಭಾಗ ನಿಯಂತ್ರಣಾಧಿಕಾರಿಗಳ ಹುದ್ದೆಗಳು ದರ್ಜೆ-1(ಹಿರಿಯ) ಹುದ್ದೆಗಳಾಗಿದ್ದು ದರ್ಜೆ -1 (ಕಿರಿಯ) ಅಧಿಕಾರಿಗಳನ್ನು ಜೇಷ್ಠತೆ ಹಾಗೂ ಆಯ್ಕೆ ಆಧಾರದ ಮೇಲೆ ಪರಿಗಣಿಸಿ ಬಡ್ತಿ ನೀಡಿ ಹುದ್ದೆಗಳನ್ನು ತುಂಬಿರುವುದರಿಂದ ಯಾವುದೇ ತಪ್ಪು ಉಂಟಾಗಿರುವುದಿಲ್ಲ. ಆದುದರಿಂದ, ಯಾವುದೇ ಶಿಸ್ತು ಕ್ರಮ ತೆಗೆದುಕೊಳ್ಳುವ ಪ್ರಮೇಯವಿರುವುದಿಲ್ಲ.

ನದಿಗಳಲ್ಲಿ ಮಾಲಿನ್ಯಕ್ಕೆ ಕಾರಣರಾದವರ ಮೇಲೆ ಕ್ರಮ

578 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ವಿಜ್ಞಾನ ಮತ್ತು ಯಂತ್ರಕಲಾ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಯಾವ ಯಾವ ನಗರಗಳಲ್ಲಿ ಮತ್ತು ನದಿಗಳಲ್ಲಿ ವಿವಿಧ ಬಗೆಯ ಮಾಲಿನ್ಯವುಂಟಾಗಿರುವುದು. ಮಾಲಿನ್ಯಕ್ಕೆ ಕಾರಣರಾದವರಲ್ಲಿ ಯಾರ ಯಾರ ಮೇಲೆ ಕಾನೂನು ಕ್ರಮ ಜರುಗಿಸಲಾಗಿದೆ?*

ಆ) *ಅನೇಕ ವಾಹನಗಳಲ್ಲಿ 'ಏರ್ ಹಾರನ್' ಗಳನ್ನು ಹಾಕಿ ಶಬ್ದ ಮಾಲಿನ್ಯವುಂಟಾಗುತ್ತಿದ್ದರೂ ಇವುಗಳನ್ನು ನಿಷೇದಿಸದೆ ಇರುವುದಕ್ಕೆ ಕಾರಣವೇನು?*

ಡಾ|| ಎಚ್.ಆರ್. ರಾಜು (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು) :

ಅ) ನಗರಗಳು ಹಾಗೂ ನದಿಗಳಲ್ಲಿ ಉಂಟಾಗುವ ಮಾಲಿನ್ಯವೆಂದರೆ ಜಲ ಮಾಲಿನ್ಯ ವಾಯು ಮಾಲಿನ್ಯ ಹಾಗೂ ಶಬ್ದ ಮಾಲಿನ್ಯ.

ನಗರಗಳಲ್ಲಿ ಜಲ ಮಾಲಿನ್ಯವು ಕಾರ್ಖಾನೆಗಳಿಂದ ಹೊರಬರುವ ಕಲ್ಮಷ ನೀರು ಹಾಗೂ ಗೃಹ ಬಳಕೆಯಿಂದ ಹೊರ ಬರುವ ಕೊಳಚೆ ನೀರಿನಿಂದ ಉಂಟಾಗುತ್ತದೆ.